ಬೆಂಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸ್ಯ 1902—1903ನೇ ಇಸವಿ ಮಿ॥ ಅರ್ಜೀ ನಂಬರ್ 375.

ಅರ್ಜೀದಾರ್ರು ಬೆಂಗಳೂರಿನಲ್ಲಿ ಇರುವ ಮೈಸೂರು H. H. ಮಹಾರಾಜಾ ಯವರ ಎಡಿಕಾಂಗು ಆಗಾರ್ಜಾ, ಹುಜ್ಜನಾದ ಕಂಟೋನ್ಮೆಂಟು ವಾಸಸ್ಥನಾಗಿ ಹಾಲಿ ಹುಜ್ಜರ ಆಸ್ಪತ್ರೆಯಲ್ಲಿ ಇರುವ ಆಗಾಹುರ್ಸೆ ಅಲ್ಲಿರ ಆಸ್ತೀ ವಿಷಯದಲ್ಲಿ—

ಸದರೀ ಹುಜ್ಜನಾದ ಆಗಹುರ್ಸೆ ಅಲ್ಲಿ ಯವರಿಗೆ ಅಂಣನು ಆಗಜೇಕೆಂಬ ಹಕ್ಕಿನ ಮೇಲೆ ಆಗಾರ್ಜಾ ಎಂಬವರು ಸದರೀ ಹುಜ್ಜನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬ್ಯೈ ಅರ್ಜಿಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬ್ಯೈ ಸ್ಯ 1903ನೇ ಇಸವಿ ಫಿಬ್ರವರಿ ತಾರೀಖು 20ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸ್ಯ 1903ನೇ ಇಸವಿ ಫಿಬ್ರವರಿ ತಿಂಗಳು 14ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಸಿಂಗ್ಯಾಚಾರ್, ಸಬ್ ಜಡ್ಜ್.

ಚಿಕ್ಕಬಳ್ಳಾಪುರ ಮುನ್ಸೀಫ್ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ ಶಿಡ್ಲಘಟ್ಟ ತಾಲ್ಲೂಕು ನಾಗಮಂಗ್ಲದ ವಾಸಸ್ಥ ಸಾವಮೂ ಅಪ್ಪಯ್ಯಯ್ಯನ ವಿಷಯದಲ್ಲಿ—

ಸ್ಯ 1902–1903ನೇ ಇಸವಿ ದಿವಾಳೀ ಮಿಸಲೇನಿಯಸ್ ಕೇಸ್ ನಂಬರ್ 155.

ಹುಕ್ಕುಂ.

ಮೇಲ್ಕಂಡ ಸದರೀ ಸಾವಮೂ ಅಪ್ಪಯ್ಯನು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು :—ಮುನಸೀಫ್ ಸಿ. ಸುಬ್ಬರಾವ್ ಎಸ್ಕ್ವಯರ್ ಯವರ ರೂಬರೂ ಅರ್ಜಿದಾರನಾದ ಸಾವಮೂ ಅಪ್ಪಯ್ಯನ ಪರವಾಗಿ ಖುದ್ದು ಅವರ ಸಮಕ್ಷವದಲ್ಲಿ ಮತ್ತು ಸದರೀಯವನ ಲೇಣೇದಾರರಾದ ಎದರರ್ಜಿದಾರ್ರು ಗೈರ್‌ಹಾಜರು ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತೀ ನೋಟಿಸ್ ಖುದ್ದು ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಸಾವಮೂ ಅಪ್ಪಯ್ಯನು ಹ್ಞೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲವೆ ಇದಕ್ಕೆ ಲಗ್ನತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸೂಲಕ್ಕೂ ಸ್ತರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರೀಯಿಂದ ಸಹ ಅವನನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1903ನೇ ಇಸವಿ ಫೆಬ್ರವರಿ 13ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತು ನಿಸಿ ಕೊಡಲ್ಪಟ್ಟಿತು.

ಸೂಲದ ಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ಹಕ್ಕುದಾರರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣೆ ಬಂಟಾದ್ದು	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಏನಾದರೂ ಇದ್ದರೆ.	ಪರಾ.
1	ದೇವನಹಳ್ಳಿ ತಾಲ್ಲೂಕು ವಡಿಗೇನಹಳ್ಳಿಯಲಿರುವ ಅಳ್ಳಾಪಕಲ್ಲು ಬಸಣ್ಣನವರು.	98—0—2	..	ಡಿಕ್ರಿ ಬಾಬತು	
2	ಡಿಟೋ ಊರು, ನೂಲು ಅಂಗಡಿ ಹುಚ್ಚಣ್ಣನವರು.	30—0—0			
3	ಡಿಟೋ ಅಪ್ಪೂರಪ್ಪನವರು	80—0—0			
4	ಶಿಡ್ಲಘಟ್ಟ ತಾಲ್ಲೂಕು ನಾಗಮಂಗಲದ ಶಾನುಭೋಗ ನಾರಣಪ್ಪನವರು.	40—0—0			
		248—0—2			

ಸಿ. ಸುಬ್ಬರಾವ್,
ಮುನ್ಸೀಫ್.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಆಫೀಸ್.

ನೋಟಿಸ್.

ತಾರೀಖು 14ನೇ ಫೆಬ್ರವರಿ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಬೆಂಗಳೂರು ಷಹರು ಮ್ಯುನಿಸಿಪಲ್ ಸರಹದ್ದಿನೊಳಗೆ ವಾರಸ್‌ದಾರರಿಲ್ಲದೆ ತಿರುಗಾಡುತ್ತಲಿರುವ ಪೋಲಿ ನಾಯಿಗಳು ಬರುವ ಮಾಹೆ 1ನೇ ತಾರೀಖು ಲಾಗಾಯಿತು 1903ನೇ ಇಸವಿ ಜೂನ್ 30ನೇ ತಾರೀಖು ವರಿಗೂ ಕೊಲ್ಲಲ್ಪಡುವವು. ನಾಯಿಗಳನ್ನು ಇಟ್ಟುಕೊಂಡಿರುವವರೆಲ್ಲರು ಅವುಗಳನ್ನು ಕಟ್ಟುಹಾಕಿಕೊಳ್ಳಬೇಕು. ಅಥವಾ ಬೀದಿಗಳಲ್ಲಿ ತಿರುಗಾಡುವದಕ್ಕೆ ಬಿಟ್ಟಲ್ಲಿ ಅವುಗಳಿಗೆ ಕೊರಳಪಟ್ಟಿ ಹಾಕಿರಬೇಕೆಂದು ಅಪೇಕ್ಷಿಸಲ್ಪಟ್ಟಿರುತ್ತಾರೆ.

ಪಿ. ಪಲ್ಪ್,
ಫೂರ್ ಪ್ರೆಸಿಡೆಂಟ್.

ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ.

ಬೆಂಗಳೂರ್, ತಾರೀಖು 2ನೇ ಫೆಬ್ರವರಿ 1903.

ಸರ್ವಿಸ್ ರಿಜಿಸ್ಟರ್‌ಗಳು ಈಗತಾನೆ ಗೌರ್ನಮೆಂಟ್ ಸೆಂಟ್ರಲ್ ಪ್ರೆಸ್‌ನಿಂದ ತಲ್ಪಿರುವದ್ದರಿಂದ ಪ್ರತಿ ಬಂದಕ್ಕೆ ಆರ್ಧಾಣೆ ಮೇರೆ ಹಾಲಿ ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋವಿನಲ್ಲಿ ಮಾರಾಟಕ್ಕೆ ಸಿದ್ಧವಾಗಿರುತ್ತೆಂದು ಇದರಿಂದ ಪ್ರಸಿದ್ಧಪಡಿಸಿದೆ.

ನೋಟಿಸ್. ಬೆಂಗಳೂರು, ತಾರೀಖು 7ನೇ ಫೆಬ್ರವರಿ 1903.

1903ನೇ ಇಸವಿ ಲೋವರ್ ಸೆಕಂಡರೀ ಪರೀಕ್ಷೆಗೆ ನೇಮಕವಾಗಿರುವ ಹೊಸ ಪದ್ಯಸಾರವು (Iನೇ ಭಾಗ) ಬೆಂಗಳೂರ್ ಗೌರ್ನಮೆಂಟ್ ಸೆಂಟ್ರಲ್ ಬುಕ್‌ಡಿಪೋವಿನಲ್ಲಿ ಬಿಕರಿಗೆ ಸಿದ್ಧವಾಗಿರುತ್ತೆ. ಅದರ ಖರೀದಿ ಪ್ರತಿ 1ಕ್ಕೆ 5 ಆಣೆಗಳು.

ಎಸ್. ಅಬ್ದುಲ್ ಹೈ,
ಕ್ಯೂರೇಟರ್.

ನೋಟಿಸ್.

ಬೆಂಗಳೂರು ಹೊಸ ತರಗಿನಪೇಟೆಯಲ್ಲಿಯು ಹಳೇ ತರಗಿನಪೇಟೆಯಲ್ಲಿಯೂ ಇರುವ ವಿಶಿಷ್ಟ ಮಂಡೀದಾರುಗಳಿಗೂ ಈ ಕೆಳಗೆ ರುಜು ಮಾಡಿರುವರು ತಿಳಿಯಪಡಿಸುವದೇನಂದರೆ—ನನ್ನ ಪಾಲುದಾರರಾದ ಬೆಂಗಳೂರು ಚಿಕ್ಕಪೇಟೆ ಅಂಗಡಿ ರಾಮಯ್ಯ, ಚಾಮರಾಜ ಪೇಟೆ ಅಂಗಡಿ ವೀರಭದ್ರಪ್ಪ, ನಾಗಪ್ಪ, ಬಸವಾಪುರದ ಅಂಗಡಿ ರಂಗಪ್ಪ ಇವರುಗಳು ತಮ್ಮ ಅಂಗಡಿಗಳಿಗೆ ಬೇಕಾದ ಜಿನಸಿಗಳನ್ನು ಕೇಳಿದಹಾಗೆಲ್ಲ ನನ್ನ ಹೆಸರನ್ನು ಆಯಾಯ ಅಂಗಡೀದಾರ್ರ ಹೆಸರನ್ನು ಜಾಯಂಟಾಗಿ ಲೆಕ್ಕದಲ್ಲಿ ಕೇರಿಸಿ ಸರ್ಕುಗಳನ್ನು ತೆಗದುಕೊಳ್ಳುತ್ತಿದ್ದರಪ್ಪ ಈಗ ನಾವುಗಳು ಲೆಕ್ಕ ಜಡ್ತಿ ನೋಡುತ್ತಿರುವದ್ದರಿಂದ ನಮ್ಮ ಪಾಲುದಾರ್ರು ನಿಮಿಗೆ ಯೇನಾದರು ಇದುವರಿವಿಗೆ ಬಾಕಿ ಕೊಡಬೇಕಾಗಿದ್ದಲ್ಲಿ ಮೇಲ್ಕಂಡ ಅಂಗಡೀದಾರರಿಂದಲೇ ವಸೂಲು ಮಾಡಿಕೊಳ್ಳತಕ್ಕದ್ದು. ಈ ಲಾಗಾಯಿತು ಮೇಲ್ಕಂಡ ಅಂಗಡಿದಾರರುಗಳು ಬಂದು ಸರ್ಕುಗಳು ಕೇಳಿದಲ್ಲಿ ನಿಮಿಗೆ ಇಷ್ಟವಿದ್ದಲ್ಲಿ ಅವರ ಹೆಸರನ್ನು ಮಾತ್ರವೇ ಲೆಕ್ಕದಲ್ಲಿ ಬರದುಕೊಂಡು ಕೊಡಬಹುದು. ನನ್ನ ಹೆಸರು ಜಾಯಂಟಾಗಿ ಲೆಕ್ಕದಲ್ಲಿ ಕೇರಿಸಿ ಸರ್ಕು ಕೊಟ್ಟದ್ದಾದರೆ ನಾನು ಜವಾಬ್ದಾರನಾಗುವದಿಲ್ಲ. ಇದೇ ವಿಷಯವನ್ನು ಮೊದಲೇ ನಿಮ್ಮಗಳಿಗೆ ಮೊಖಾಮ್ತಾ ತಿಳಿಸಿ ಇರುತ್ತೇನೆ.

ತಾರೀಖು 12ನೇ ಫೆಬ್ರವರಿ 1903. ಬೆಂಗಳೂರು ತರಗಿನಮಂಡಿ, ಮೂವಳ್ಳಿ ತಾ|| ಹುಚ್ಚಪ್ಪನ ರುಜು.

Mysore Government Central Press, Bangalore—1903.